# ಗಜಪಡೆಯ ೨ನೇ ತಂಡಕ್ಕೆ ಸಾಂಪ್ರದಾಯಿಕ ಸ್ವಾಗತ

## ಜಂಬೂಸವಾರಿಯ ೭ ಆನೆಗಳನ್ನು ಬರಮಾಡಿಕೊಂಡ ಜಿಲ್ಲಾಧಿಕಾರಿ ಡಿ.ರಂದೀಪ್

ಮೈಸೂರು,ಆ.೩೧– ವಿಶ್ವವಿಖ್ಯಾತ ದಸರಾ ಮಹೋತ್ಸವ ೨೦೧೭ರ ಮೆರವಣಿಗೆಯಲ್ಲಿ ಪಾಲ್ಗೊಳ್ಳಲು ಗುರುವಾರ ನಗರಕ್ಕೆ ಆಗಮಿಸಿದ ಗಜಪಡೆಯ ಎರಡನೇ ತಂಡದ ೭ ಆನೆಗಳನ್ನು ಅಂಬಾವಿಲಸ ಅರಮನೆ ಪ್ರವೇಶದ್ವಾರದಲ್ಲಿ ಸಾಂಪ್ರದಾಯಿಕವಾಗಿ ಸ್ವಾಗತಿಸಲಾಯಿತು.

ಅರಮನೆಯ ಪೂರ್ವ ದಿಕ್ಕಿನಡೆಗೆ ಇರುವ ಜಯಮಾರ್ತಾಂಡ ದ್ವಾರದ ಮುಂಭಾಗದಲ್ಲಿ ದಸರಾ ವಿಶೇಷಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಡಿ.ರಂದೀಪ್ ಅವರು ಗುರುವಾರ ಸಂಜೆ ೭ ಆನೆಗಳ ತಂಡವನ್ನು ಬರಮಾಡಿಕೊಂಡರು.

ಈ ಸಂದರ್ಭದಲ್ಲಿ ವಲಯ ಅರಣ್ಯ ಸಂರಕ್ಷಣಾಧಿಕಾರಿ ವಿ.ಏಡುಕೊಂಡಲು ಅವರ ನೇತೃತ್ವದಲ್ಲಿ ಎರಡನೇ ತಂಡದ ಆನೆಗಳಿಗೆ ಪೂಜೆ ನೆರವೇರಿಸಲಾಯಿತು. ನಂತರ ಅರಮನೆ ಮಂಡಳಿ ವತಿಯಿಂದಲೂ ಸ್ವಾಗತಿಸಲಾಯಿತು.

**ಗಜಪಡೆಯಲ್ಲಿ ೭ ಆನೆಗಳು:** ದಸರಾ ಮಹೊತ್ಸವಕ್ಕೆ ಆಗಮಿಸಿದ ಎರಡನೇ ತಂಡದ ಗಜಪಡೆಯಲ್ಲಿ ಗೋಪಾಲಸ್ವಾಮಿ (೩೫), ಕೃಷ್ಣ (೫೬), ದ್ರೋಣ (೩೫), ವಿಕ್ರಮ (೪೪), ಗೋಪಿ (೩೫), ಹರ್ಷ (೫೦) ಮತ್ತು ಪ್ರಶಾಂತ (೬೧) ಆನೆಗಳು ಇವೆ.

ಗೋಪಾಲಸ್ವಾಮಿ, ಕೃಷ್ಣ, ದ್ರೋಣ ಮತ್ತಿಗೋಡು ಆನೆ ಶಿಬಿರದಿಂದ ಹಾಗೂ ವಿಕ್ರಮ, ಗೋಪಿ, ಹರ್ಷ, ಪ್ರಶಾಂತ ಆನೆಗಳು ದುಬಾರೆ ಆನೆ ಶಿಬಿರದಿಂದ ಆಗಮಿಸಿವೆ. ಎಲ್ಲಾ ಆನೆಗಳು ಗಂಡು ಆನೆಗಳಾಗಿದ್ದು, ನಿರಾತಂಕವಾಗಿ ಲಾರಿಯಿಂದ ಇಳಿದು ಅರಮನೆ ಆವರಣದಲ್ಲಿ ಬೀಡುಬಿಟ್ಟಿವೆ.

ಇದೇ ಸಂದರ್ಭದಲ್ಲಿ ಅರಮನೆ ಮಂಡಳಿ ವತಿಯಿಂದ ನಿತ್ಯ ಬಳಕೆಯ ಕಿಟ್‌ಗಳನ್ನು ವಿತರಿಸಲಾಯಿತು. ಆ.೧೨ರಂದು ನಾಗಾಪುರ ಗಿರಿಜನ ಆಶ್ರಮ ಶಾಲೆ ಆವರಣದಿಂದ ಹೊರಟ ಮೊದಲ ಗಜಪಡೆ ಆ.೧೭ರಂದು ಅದ್ದೂರಿ ಸ್ವಾಗತದೊಂದಿಗೆ ಅರಮನೆ ಪ್ರವೇಶಿಸಿತ್ತು.



**ಮೈಸೂರಿನ ಅಂಬಾವಿಲಾಸ ಅರಮನೆಗೆ ಆಗಮಿಸಿದ ಗಜಪಡೆಯ ೨ನೇ ತಂಡವನ್ನು ಜಿಲ್ಲಾಧಿಕಾರಿ ಡಿ.ರಂದೀಪ್ ಸಾಂಪ್ರದಾಯಿಕವಾಗಿ ಸ್ವಾಗತಿಸಿದರು. ವಿ.ಏಡುಕುಂಡಲು, ಟಿ.ಎಸ್.ಸುಬ್ರಹ್ಮಣ್ಯ, ಅರ್ಪಿತಾ ರಂದೀಪ್, ಡಿ.ನಾಗರಾಜು ಮುಂತಾದವರು ಚಿತ್ರದಲ್ಲಿದ್ದಾರೆ.**

> ಎಲ್ಲಾ ೧೫ ಆನೆಗಳೂ ಆರೋಗ್ಯವಾಗಿದ್ದು, ದಸಾರಾ ಮೆರವಣಿಗೆಯಲ್ಲಿ ಪಾಲ್ಗೊಳ್ಳಲಿವೆ. ಈಗಾಗಲೇ ಎಲ್ಲಾ ಕಾವಾಡಿಗಳು ಮತ್ತು ಮಾವುತರ ಕುಟುಂಬಗಳ ವಸತಿ ಶೆಡ್‌ಗಳನ್ನು ಸಿದ್ಧಪಡಿಸಲಾಗಿದೆ. ಆನೆಗಳ ಬಗ್ಗೆ ವಿಶೇಷ ಕಾಳಜಿ ತೆಗೆದುಕೊಂಡು ಅವುಗಳನ್ನು ಪೋಷಿಸಲಾಗುವುದು.
> **-ಡಿ.ರಂದೀಪ್, ಜಿಲ್ಲಾಧಿಕಾರಿ**

ಅರ್ಜುನನ ನೇತೃತ್ವದಲ್ಲಿ ಬಂದ ಈ ಎಂಟು ಆನೆಗಳು ಅರಮನೆಯ ಆವರಣದಲ್ಲಿ ಬೀಡು ಬಿಟ್ಟಿವೆ. ಸೆ.೩೦ರಂದು ನಡೆಯಲಿರುವ ವಿಜಯದಶಮಿ ಜಂಬೂಸವಾರಿ ಮೆರವಣಿಗೆಯಲ್ಲಿ ಒಟ್ಟು ೧೫ ಆನೆಗಳು ಭಾಗಿವಹಿಸಲಿವೆ.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಡಿ.ರಂದೀಪ್ ಹಾಗೂ ಪತ್ನಿ ಅರ್ಪಿತಾ ರಂದೀಪ್, ವಲಯ ಅರಣ್ಯ ಸಂರಕ್ಷಣಾಧಿಕಾರಿ ವಿ.ಏಡುಕೊಂಡಲು, ಅರಮನೆ ಆಡಳಿತ ಮಂಡಳಿ ಉಪ ನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ. ಆನೆ ವೈದ್ಯಾಧಿಕಾರಿ ಡಾ.ನಾಗರಾಜು ಮುಂತಾದವರು ಉಪಸ್ಥಿತರಿದ್ದರು.

# 'ಅತಿಥಿಗಳ ವಸತಿ ವ್ಯವಸ್ಥೆಗೆ ಸಹಕರಿಸಿ'

## ಹೋಟೆಲ್ ಮಾಲೀಕರಿಗೆ ಅಪರ ಜಿಲ್ಲಾಧಿಕಾರಿ ಟಿ.ಯೋಗೇಶ್ ಮನವಿ

ಮೈಸೂರು.ಆ.೩೧– ದಸರಾದಲ್ಲಿ ನಡೆಯುವ ವಿವಿಧ ಮನರಂಜನಾ ಮತ್ತು ಕ್ರೀಡಾ ಕಾರ್ಯಕ್ರಮಗಳಿಗಾಗಿ ಪ್ರತಿನಿಧಿಗಳು ಮತ್ತು ಸ್ಪರ್ಧಾಳುಗಳು ಆಗಮಿಸಲಿದ್ದು, ಅವರಿಗೆ ಸೂಕ್ತ ವಸತಿ ವ್ಯವಸ್ಥೆ ಒದಗಿಸಲು ಹೋಟೆಲ್ ಮಾಲೀಕರು ಸಹಕರಿಸುವಂತೆ ಅಪರ ಜಿಲ್ಲಾಧಿಕಾರಿ ಟಿ.ಯೋಗೇಶ್ ಮನವಿ ಮಾಡಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಗರದ ಹೋಟೆಲ್ ಮಾಲೀಕರೊಂದಿಗೆ ಗುರುವಾರ ಸಭೆ ನಡೆಸಿದ ಅವರು, ಜಿಲ್ಲಾಡಳಿತ ಹಾಗೂ ದಸರಾ ಮಹೋತ್ಸವ ಸಮಿತಿ ಅನೇಕ ಗಣ್ಯರನ್ನು ಆಹ್ವಾನಿಸಲಿದೆ. ಅವರ ಆತಿಥ್ಯಕ್ಕಾಗಿ ನಗರದ ಹೋಟೆಲ್‌ಗಳಲ್ಲಿ ಕೊಠಡಿಗಳನ್ನು ಕಾಯ್ದಿರಿಸಬೇಕಿದೆ. ಹಾಗಾಗಿ ಹೋಟೆಲ್ ಮಾಲೀಕರು ಶೇ.೫೦ರ ರಿಯಾಯಿತಿಯಲ್ಲಿ ಕೊಠಡಿಗಳನ್ನು ಒದಗಿಸುವಂತೆ ಕೋರಿದರು.

**ಪೊಲೀಸರ ಮನವಿಗೆ ಅಸಮಾಧಾನ:** ದಸರಾ ಮಹೋತ್ಸವದ ಹೆಸರಲ್ಲಿ ನಗರದ ಪ್ರತಿ ಲಾಡ್ಜ್‌ನಲ್ಲಿ ಕಡ್ಡಾಯವಾಗಿ ಎರಡು ಕೋಣೆಗಳನ್ನು ಪೊಲೀಸರಿಗೆ ಕಾದಿರಿಸುವಂತೆ ಸೂಚಿಸಿರುವ ಬಗ್ಗೆ ಹೋಟೆಲ್ ಮಾಲೀಕರು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಈ ವೇಳೆ ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ ಮಾತನಾಡಿ, ಕಳೆದ ವರ್ಷ ಜಿಲ್ಲಾಡಳಿತದ ವತಿಯಿಂದ ನಗರದ ಎಲ್ಲ ಹೋಟೆಲ್‌ಗಳಲ್ಲಿ ಶೇ.೫ರಷ್ಟು ಕೋಣೆಗಳನ್ನು ಕಾದಿರಿಸಲಾಗಿತ್ತು. ಈ ವರ್ಷ ಪೊಲೀಸ್ ಇಲಾಖೆಯವರು ಸಹ ಪ್ರತ್ಯೇಕವಾಗಿ ಲಾಡ್ಜ್‌ಗಳಲ್ಲಿ ಎರಡು ಕೋಣೆ ಕಾದಿರಿಸುವಂತೆ ಆಯಾಯ ಠಾಣೆಯ ಇನ್ಸ್‌ಪೆಕ್ಟರ್‌ಗಳು ತಮ್ಮ ವ್ಯಾಪ್ತಿಯ ಲಾಡ್ಜ್‌ಗಳಿಗೆ ಪತ್ರ ಬರೆದಿರುವುದು ಗೊಂದಲ ಮೂಡಿಸಿದೆ. ಜಿಲ್ಲಾಡಳಿತ ಕಾದಿರಿಸಿದರೆ ಬಿಲ್ ಪಾವತಿಯಾಗುತ್ತದೆ, ಪೊಲೀಸ್ ಇಲಾಖೆಗೆ ಕೋಣೆ ನೀಡಿದರೆ ಬಿಲ್ ಪಾವತಿಯಾಗುವುದಿಲ್ಲ ಎಂದು ಅವರು ದೂರಿದರು.

ಸಭೆಯಲ್ಲಿ ನಗರದ ಪ್ರಮುಖ ಹೋಟೆಲ್‌ಗಳ ಮಾಲೀಕರು ಭಾಗವಹಿಸಿದ್ದರು.

# ಸೆ.೨೨ರಿಂದ ೨೮ರವರೆಗೆ ಯುವ ದಸರಾ

## ಸಂಗೀತ ಕ್ಷೇತ್ರದ ದಿಗ್ಗಜರ ಆಹ್ವಾನಕ್ಕೆ ಸಮಿತಿ ಚಿಂತನೆ

ಮೈಸೂರು,ಆ.೩೧– ನಾಡಹಬ್ಬ ದಸರಾದ ಯುವ ದಸರಾ ಹಾಗೂ ವಿವಿಧ ವೇದಿಕೆಗಳಲ್ಲಿ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಇಳಯರಾಜ, ಹಂಸಲೇಖ ಸೇರಿದಂತೆ ಸಂಗೀತ ಹಾಗೂ ಸಂಸ್ಕೃತಿಕ ಕ್ಷೇತ್ರದ ದಿಗ್ಗಜರನ್ನು ಆಹ್ವಾನಿಸಲು ದಸರಾ ಮಹೋತ್ಸವ ಸಮಿತಿ ನಿರ್ಧರಿಸಿದೆ

ಈ ಸಂಬಂಧ ಗುರುವಾರ ಜಿಲ್ಲಾಧಿಕಾರಿ ಡಿ.ರಂದೀಪ್ ಅವರ ನೇತೃತ್ವದಲ್ಲಿ ದಸರಾ ಮಹೋತ್ಸವ ಸಮಿತಿ ಅಧಿಕಾರಿಗಳ ಸಭೆ ನಡೆಸಲಾಯಿತು. ನಗರದ ಮಹಾರಾಜ ಕಾಲೇಜು ಮೈದಾನದಲ್ಲಿ ಸೆ.೨೨ರಿಂದ ೨೮ರವರೆಗೆ ನಡೆಯುವ ಯುವ ದಸರಾಕ್ಕೆ ದೇಶದ ಪ್ರಖ್ಯಾತ ಕಲಾ ವಿದರನ್ನು ಆಹ್ವಾನಿಸಲಾಗುತ್ತಿದೆ.

ಸೆ.೨೧ರಿಂದ ೨೮ರವರೆಗೆ ನಗರದ ಅರಮನೆ ಮುಂಭಾಗದ ವೇದಿಕೆಯಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದ್ದು, ಹಿಂದೂಸ್ತಾನಿ ಸಂಗೀತ, ಕರ್ನಾಟಕ ಸಂಗೀತ, ಸುಗಮ ಸಂಗೀತ ಹಾಗೂ ಜಾನಪದ ಸಂಗೀತ ಕ್ಷೇತ್ರಗಳಲ್ಲಿ ಹೆಸರು ಮಾಡಿರುವ ಕಲಾವಿದರನ್ನು ಆಹ್ವಾನಿಸಲು ತೀರ್ಮಾನಿಸಲಾಗಿದೆ ಎಂದು ಜಿಲ್ಲಾಧಿಕಾರಿ ತಿಳಿಸಿದರು.






ಅಲ್ಲದೇ ನಾಡಿನ ಹೆಸರಾಂತ ಸಂಗೀತ ನಿರ್ದೇಶಕ ಇಳಯರಾಜ, ಪ್ರಖ್ಯಾತ ಗಾಯಕ ಎಸ್.ಪಿ. ಬಾಲಸುಬ್ರಹ್ಮಣ್ಯಂ, ಸಂಗೀತ ನಿರ್ದೇಶಕ ಹಂಸಲೇಖ ಅವರನ್ನು ಆಹ್ವಾನಿಸಲು ಚಿಂತನೆ ನಡೆದಿದೆ. ಸ್ಯಾಕ್ಸೋಫೋನ್ ವಾದಕ ಕದ್ರಿ ಗೋಪಾಲನಾಥ್, ಜಾಕೀರ್ ಹುಸೇನ್, ಹೆಸರಾಂತ ಕೊಳಲು ವಾದಕ ಹರಿಪ್ರಸಾದ್ ಚೌರಾಸಿಯಾ, ರೋಣು ಮಜುಂದಾರ್, ರಷೀದ್ ಖಾನ್ ಮೊದಲಾದ ಖ್ಯಾತನಾಮ ಕಲಾವಿದರನ್ನು ಆಹ್ವಾನಿಸಲು ದಸರಾ ಮಹೋತ್ಸವದ ಸಾಂಸ್ಕೃತಿಕ ಸಮಿತಿ ಸಿದ್ಧತೆ ನಡೆಸಿದೆ ಎಂದು ಹೇಳಿದರು.

ಸೆ.೩೦ರಂದು ನಡೆಯುವ ಜಂಬೂ ಸವಾರಿ ಮೆರವಣಿಗೆ ನಂತರ ಬನ್ನಿಮಂಟಪ ಮೈದಾನದಲ್ಲಿ ಸಂಜೆ ನಡೆಯಲಿರುವ ಪಂಜಿನ ಕವಾಯತು ಕಾರ್ಯಕ್ರಮದಲ್ಲಿ ೩೦೦ರಿಂದ ೪೦೦ ಕಲಾವಿದರು ಏಕ ಕಾಲಕ್ಕೆ ನೃತ್ಯರೂಪಕ ನಡೆಸಿಕೊಡಲಿದ್ದಾರೆ ಎಂದು ಹೇಳಿದರು.

| ೭ ದಿನ ಯುವ ದಸರಾ ರಂಗು | |
|---|---|
| ಸೆ.೨೨ರಂದು | ಅರ್ಮಾನ್ ಮಲಿಕ್ |
| ೨೩ರಂದು | ಅಂಕಿತ್ ತಿವಾರಿ |
| ೨೪ರಂದು | ಕೋಕ್ ಸ್ಟುಡಿಯೋ |
| ೨೫ರಂದು | ಅರ್ಜುನ್ ಜನ್ಯ ಮತ್ತು ತಂಡ |
| ೨೬ರಂದು | ನೀತಿ ಮೋಹನ್ |
| ೨೭ರಂದು | ಫಲಕ್ ಮುಚ್ಛಾಲ್ |
| ೨೮ರಂದು | ಸ್ಯಾಂಡಲ್‌ವುಡ್ ನೈಟ್ಸ್ |
| ಕಾರ್ಯಕ್ರಮ ನಡೆಯಲಿದೆ. | |

ಯುವ ದಸರಾ ಸಮಿತಿ ಕಾರ್ಯದರ್ಶಿ ಸೋಮಶೇಖರ್, ಸಾಂಸ್ಕೃತಿಕ ದಸರಾ ಸಮಿತಿ ಕಾರ್ಯದರ್ಶಿ ಎಚ್.ಚೆನ್ನಪ್ಪ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಹಾಗೂ ವಿವಿಧ ಕಂಪನಿ, ಬ್ಯಾಂಕುಗಳ ಮುಖ್ಯಸ್ಥರು ಸಭೆಯಲ್ಲಿ ಭಾಗವಹಿಸಿದ್ದರು.

# ದಸರಾ: ಸಿದ್ಧತೆ ಪರಿಶೀಲಿಸಿದ ಜಿಲ್ಲಾಧಿಕಾರಿ ರಂದೀಪ್

## ಬಿಗಿ ಬಂದೋಬಸ್ತ್ ಏರ್ಪಡಿಸುವಂತೆ ಪೊಲೀಸರಿಗೆ ಸೂಚನೆ



**ನಾಡ ಹಬ್ಬ ದಸರಾ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಡಿ.ರಂದೀಪ್ ಅವರು ಮೈಸೂರು ಅರಮನೆ ಆವರಣದಲ್ಲಿ ಬಿಗಿಭದ್ರತೆಗೆ ಸಂಬಂಧಿಸಿದಂತೆ ಪೊಲೀಸ್ ಅಧಿಕಾರಿಗಳೊಂದಿಗೆ ಪರಿಶೀಲನೆ ನಡೆಸಿದರು.**

ಮೈಸೂರು,ಆ.೩೧– ವಿಶ್ವ ವಿಖ್ಯಾತ ಮೈಸೂರು ದಸರಾಗೆ ದಿನಗಣನೆ ಆರಂಭವಾಗುತ್ತಿದ್ದು, ಜಿಲ್ಲಾಧಿಕಾರಿ ಡಿ.ರಂದೀಪ್ ನಗರದ ಅರಮನೆ ಹಾಗೂ ಬನ್ನಿಮಂಟಪದ ಪಂಜಿನ ಕವಾಯತ್ತು ಮೈದಾನಕ್ಕೆ ತೆರಳಿ ಅಲ್ಲಿನ ಸಿದ್ಧತೆಗಳನ್ನು ಪರಿಶೀಲನೆ ನಡೆಸಿದ್ದಾರೆ.

ಕಾರ್ಯಕ್ರಮ ಉದ್ಘಾಟನೆಗೆ ರಾಜ್ಯಪಾಲರು, ಮುಖ್ಯಮಂತ್ರಿಗಳು ಹಾಗೂ ಗಣ್ಯಾತಿಗಣ್ಯರು ಆಗಮಿಸುವುದರಿಂದ ಯಾವುದೇ ಲೋಪವಾಗದಂತೆ ಸಿದ್ಧತೆಗಳನ್ನು ಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು. ಇದಕ್ಕೂ ಮೊದಲು ಜಿಲ್ಲಾಡಳಿತದ ವಿವಿಧ ಇಲಾಖೆಯ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ಸೆ.೩೦ರ ವಿಜಯದಶಮಿಯಂದು ನಡೆಯುವ ಜಂಬೂ ಸವಾರಿಗೆ ಅರಮನೆಯನ್ನು ಯಾವ ರೀತಿ ಸಿದ್ಧಗೊಳಿಸಬೇಕು? ಎಂದು ಚರ್ಚಿಸಿದರು.

ಅಲ್ಲದೇ ದಸರಾ ಮೆರವಣಿಗೆ ವೇಳೆ ಕೈಗೊಳ್ಳಬೇಕಾದ ಭದ್ರತೆ ಬಗ್ಗೆ ಹಿರಿಯ ಪೊಲೀಸ್ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿದರು. ಅರಮನೆ ಪ್ರವೇಶಿಸುವ ಗೇಟ್‌ಗಳಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಬೇಕು, ಯಾವುದೇ ಗೊಂದಲಕ್ಕೂ ಅವಕಾಶ ನೀಡಬಾರದು ಎಂದು ಸೂಚಿಸಿದ ಅವರು, ಅನಧಿಕೃತ ವ್ಯಕ್ತಿಗಳನ್ನು ಒಳ ಬಿಡದಂತೆ ಎಚ್ಚರ ವಹಿಸುವ ಸಲುವಾಗಿ ತೆಗೆದುಕೊಂಡಿರುವ ಭದ್ರತೆಯ ವಿಚಾರವನ್ನು ಚರ್ಚಿಸಿದರು.

ನಂತರ ಅರಮನೆ ಆವರಣದಲ್ಲಿ ಪೆಂಡಾಲ್ ವ್ಯವಸ್ಥೆ, ಆಸನದ ವ್ಯವಸ್ಥೆ ಸೇರಿದಂತೆ ಇತರೆ ಸಿದ್ಧತೆಗಳು ಅಚ್ಚುಕಟ್ಟಾಗಿ ಇರಬೇಕು. ಯಾವುದೇ ಸಮಸ್ಯೆ ಆಗದಂತೆ ಹೆಚ್ಚಿನ ಪೊಲೀಸರನ್ನು ಭದ್ರತೆಗೆ ನಿಯೋಜಿಸಿ ಎಂದು ಡಿಸಿಪಿ ವಿಷ್ಣುವರ್ಧನ್‌ಗೆ ಸೂಚನೆ ನೀಡಿದರು.

ಈ ಬಾರಿ ದಸರಾ ವೀಕ್ಷಣೆಗೆ ಸಂಬಂಧಿಸಿದಂತೆ ೩೦ ಸಾವಿರ ಜನರಿಗೆ ಆಸನದ ವ್ಯವಸ್ಥೆ ಮಾಡಲು ಜಿಲ್ಲಾಡಳಿತ ತಯಾರಿ ನಡೆಸಿದೆ. ಪಾಸ್ ಹಾಗೂ ಟಿಕೆಟ್‌ಗಳ ಸಂಖ್ಯೆಗೆ ಅನುಗುಣವಾಗಿ ಆಸನದ ವ್ಯವಸ್ಥೆಯನ್ನು ಮಾಡಿಕೊಳ್ಳುವಂತೆ ಅಧಿಕಾರಿಗಳಿಗೆ ತಿಳಿಸಿದರು.

# ದಸರಾ ಪ್ರಾಯೋಜಕತ್ವಕ್ಕೆ ಜಿಲ್ಲಾಧಿಕಾರಿ ರಂದೀಪ್ ಕರೆ

## ನಾಡಹಬ್ಬದ ಉನ್ನತಿಗೆ ಸಹಕರಿಸಲು ಉದ್ಯಮಿಗಳಿಗೆ ಮನವಿ

ಮೈಸೂರು.ಆ.೩೧– ದಸರಾ ವಿಶೇಷಾಧಿಕಾರಿ ಮತ್ತು ಜಿಲ್ಲಾಧಿಕಾರಿ ಡಿ.ರಂದೀಪ್ ಅವರು 'ದಸರಾ–೨೦೧೭'ರ ಪ್ರಾಯೋಜಕತ್ವದ ಕುರಿತು ಜಿಲ್ಲೆಯ ಪ್ರಮುಖ ಉದ್ಯಮಿಗಳೊಂದಿಗೆ ಗುರುವಾರ ತಮ್ಮ ಕಚೇರಿಯಲ್ಲಿ ಸಭೆ ನಡೆಸಿದರು.

ಮೈಸೂರು ದಸರಾ ವಿಭಿನ್ನ ಮತ್ತು ಪ್ರಸಿದ್ಧ ಕಾರ್ಯಕ್ರಮಗಳ ಸಂಗಮವಾಗಿದ್ದು, ಉದ್ಯಮಿಗಳು ಕಾರ್ಯಕ್ರಮಗಳನ್ನು ಪ್ರಾಯೋಜಿಸುವ ಮೂಲಕ ದಸರಾದಲ್ಲಿ ಪಾಲ್ಗೊಳ್ಳುವಂತೆ ಕರೆ ನೀಡಿದರು. ಉದ್ಯಮಿಗಳು ಮೈಸೂರು ನಗರದಲ್ಲಿ ಮೂಲ ಸೌಕರ್ಯ ಬಳಸಿಕೊಂಡು ಉನ್ನತಿ ಸಾಧಿಸುತಿದ್ದಾರೆ. ದಸರಾ ನಾಡಹಬ್ಬವಾಗಿದ್ದು, ಉನ್ನತಿ ಸಾಧಿಸಲು ಇದು ಉತ್ತಮ ವೇದಿಕೆ ಆಗಿರುತ್ತದೆ. ಹಾಗಾಗಿ ಹೆಚ್ಚಿನ ಸಂಖ್ಯೆಯಲ್ಲಿ ದಸರಾ ಪ್ರಾಯೋಜಕತ್ವಕ್ಕೆ ಪಾಲ್ಗೊಳ್ಳುವಂತೆ ತಿಳಿಸಿದರು.

ಮೈಸೂರು ದಸರಾ
ಕ್ರಿ ಶ 1610 ರಿಂದ ಆಚರಣೆ

ಮುಖ್ಯವಾಗಿ ಅರಮನೆ ಮತ್ತು ಯುವ ದಸರಾ ಕಾರ್ಯಕ್ರಮಗಳಲ್ಲಿ ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದ ಕಲಾವಿದರು ಮತ್ತು ಕಲಾತಂಡಗಳು ಭಾಗವಹಿಸುತ್ತಿವೆ. ಅಲ್ಲದೇ ನಗರದ ವಿವಿಧ ವೇದಿಕೆಗಳಲ್ಲಿ ಅನೇಕ ಕಾರ್ಯಕ್ರಮಗಳನ್ನು ನಿಗದಿಪಡಿಸಲಾಗಿದೆ.

ವಿಶೇಷವಾಗಿ ಪುರಭವನದಲ್ಲಿ ಮೂರು ದಿನಗಳ ಕಾಲ ೩ಡಿ ಪ್ರೊಜೆಕ್ಷನ್ ಮ್ಯಾಪಿಂಗ್ ಕಾರ್ಯಕ್ರಮ ಇದೆ. ಇಲ್ಲಿಯೂ ಪ್ರಾಯೋಜನೆಗೆ ಉತ್ತಮ ಅವಕಾಶಗಳಿವೆ ಎಂದು ಮಾಹಿತಿ ನೀಡಿ ದರು.

ಸಭೆಯಲ್ಲಿ ಲೀಡ್ ಬ್ಯಾಂಕ್ ಪ್ರಬಂಧಕ ಕೆ.ಎನ್.ಶಿವಲಿಂಗಯ್ಯ, ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ಎಚ್.ಆರ್.ರಾಮಕೃಷ್ಣೆಗೌಡ, ಪ್ರವಾಸೋದ್ಯಮ ಇಲಾಖೆಯ ಉಪನಿರ್ದೇಶಕ ಎಚ್.ಪಿ.ಜನಾರ್ದನ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಎಚ್. ಚನ್ನಪ್ಪ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಸೋಮಶೇಖರ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಾಯಕ ನಿರ್ದೇಶಕ ಆರ್.ರಾಜು, ಪ್ರಮುಖ ಕೈಗಾರಿಕೆಗಳಾದ ಟಿ.ವಿ.ಎಸ್, ಐ.ಟಿ.ಸಿ, ಆಟೊಮೋಟಿವ್ ಆಕ್ಸೆಲ್, ಜೆ.ಕೆ.ಟೈರ್, ಸಿ.ಐ.ಐ ಹಾಗೂ ಜಿಲ್ಲೆಯ ಪ್ರಮುಖ ಉದ್ಯಮಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

# ಸಿ.ನಾಗಣ್ಣಗೆ 'ಕುವೆಂಪು ಅನಿಕೇತನ ಪ್ರಶಸ್ತಿ'

## ಶಾಸಕ ವಾಸು ಅವರಿಂದ ಹಿರಿಯ ಸಾಹಿತಿಗೆ ಪ್ರಶಸ್ತಿ ಪ್ರದಾನ



**ಮೈಸೂರಿನ ಕಲಾಮಂದಿರದಲ್ಲಿ ವಿಶ್ವಮಾನವ ವಿದ್ಯಾರ್ಥಿ ಯುವ ವೇದಿಕೆ ವತಿಯಿಂದ ಸಾಹಿತಿ ಪ್ರೊ.ಸಿ.ನಾಗಣ್ಣ ಅವರಿಗೆ ಶಾಸಕ ವಾಸು 'ಕುವೆಂಪು ಅನಿಕೇತನ ಪ್ರಶಸ್ತಿ'ಯನ್ನು ಪ್ರದಾನ ಮಾಡಿದರು. ಪ್ರೊ.ನೀಲಗಿರಿ ತಳವಾರ್, ಕೆ.ಸಿ.ಬಲರಾಂ, ಎಂ.ಜೆ.ಸುರೇಶ್‌ಗೌಡ, ಸದಾಶಿವ ಹುಲ್ಲೂರ್, ಮೋಹಿತ್‌ಗೌಡ, ರಾಕೇಶ್‌ಗೌಡ ಇತರರನ್ನು ಚಿತ್ರದಲ್ಲಿ ಕಾಣಬಹುದು.**

ಮೈಸೂರು,ಆ.೩೧– ಕನ್ನಡ ಹಾಗೂ ಇಂಗ್ಲಿಷ್ ಸಾಹಿತ್ಯ ಕ್ಷೇತ್ರದಲ್ಲಿ ಮೂವತ್ತು ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಹಿರಿಯ ಸಾಹಿತಿ ಹಾಗೂ ಮೈಸೂರು ವಿವಿ ಪ್ರಸಾರಾಂಗ ನಿವೃತ್ತ ನಿರ್ದೇಶಕ ಪ್ರೊ.ಸಿ.ನಾಗಣ್ಣ ಅವರಿಗೆ ರಾಜ್ಯ ಮಟ್ಟದ 'ಕುವೆಂಪು ಅನಿಕೇತನ ಪ್ರಶಸ್ತಿ' ನೀಡುತ್ತಿರುವುದು ಉತ್ತಮ ಕಾರ್ಯ ಎಂದು ಶಾಸಕ ವಾಸು ಮೆಚ್ಚುಗೆ ವ್ಯಕ್ತಪಡಿಸಿದರು.

ನಗರದ ಕಲಾಮಂದಿರದಲ್ಲಿ ಬುಧವಾರ ವಿಶ್ವಮಾನವ ವಿದ್ಯಾರ್ಥಿ ಯುವ ವೇದಿಕೆ ವತಿಯಿಂದ ಏರ್ಪಡಿಸಿದ್ದ, ರಾಜ್ಯಮಟ್ಟದ ಅಂತರ ಕಾಲೇಜು ಸಾಂಸ್ಕೃತಿಕ ಮೇಳದ ಉದ್ಘಾಟನೆ ಮತ್ತು ಕುವೆಂಪು ಅನಿಕೇತನ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು. ಜಾತಿ ಸಂಘರ್ಷಗಳು ಹೆಚ್ಚುತ್ತಿರುವ ಸಂದರ್ಭದಲ್ಲಿ ಯುವಸಮುದಾಯದ ಸಮಾನ ಮನಸ್ಕರು ಒಂದೆಡೆ ಸೇರಿ ರಾಜ್ಯಮಟ್ಟದ ಸಾಂಸ್ಕೃತಿಕ ಮೇಳ ಏರ್ಪಡಿಸಿರುವುದು ಉತ್ತಮ ಕಾರ್ಯ. ಸಮಾಜದಲ್ಲಿನ ವೈಮನಸ್ಸುಗಳನ್ನು ಮರೆಯಲು ಇಂತಹ ಕಾರ್ಯಗಳು ಅವಶ್ಯಕ ಎಂದರು.

ಪ್ರತಿಯೊಂದು ಜಾತಿಯಲ್ಲಿಯೂ ನೂರಕ್ಕೂ ಹೆಚ್ಚು ಉಪಜಾತಿಗಳಿದ್ದು, ಅವುಗಳಲ್ಲಿಯೂ ತಾರತಮ್ಯವಿದೆ. ದೇಶದ ಪ್ರಗತಿಗಾಗಿ ಎಲ್ಲರೂ ಒಟ್ಟಾಗಿ ಜಾತಿ ಸಂಕೋಲೆಯಲ್ಲಿ ಬಂಧಿಯಾಗದೇ ಹೊಸ ಸಮಾಜ ಸೃಷ್ಟಿ ಮಾಡುವತ್ತ ಮುಂದಾಗಬೇಕು. ಅದು ಸಾಂಸ್ಕೃತಿಕ ಕಾರ್ಯಕ್ರಮಗಳಿಂದ ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಪ್ರಾಧ್ಯಾಪಕ ನೀಲಗಿರಿ ಎಂ.ತಳವಾರ್, ಜಿಪಂ ಮಾಜಿ ಅಧ್ಯಕ್ಷ ಕೆ.ಸಿ.ಬಲರಾಂ, ವಿಶ್ವಮಾನವ ವಿದ್ಯಾರ್ಥಿ ಯುವ ವೇದಿಕೆ ಅಧ್ಯಕ್ಷ ಎಂ.ಜೆ.ಸುರೇಶ್‌ಗೌಡ, ರಾಜ್ಯಾಧ್ಯಕ್ಷ ಮೋಹಿತ್‌ಗೌಡ, ಹಿರಿಯ ಪತ್ರಕರ್ತ ಸದಾಶಿವ ಹುಲ್ಲೂರ್, ಕಾರ್ಯದರ್ಶಿ ರಾಕೇಶ್‌ಗೌಡ ಉಪಸ್ಥಿತರಿದ್ದರು.

# ದಸರಾ: ರಾಷ್ಟ್ರಮಟ್ಟದ ಕ್ರೀಡೆಗಳಿಗೂ ಆದ್ಯತೆ

## ಸೆ.೨೧ರಿಂದ ಆರಂಭವಾಗಲಿರುವ ಟೂರ್ನಿಯಲ್ಲಿ ಮಹಿಳೆಯರ ಕಬಡ್ಡಿಗೂ ಅವಕಾಶ

ಮೈಸೂರು,ಆ.೩೧– ವಿಶ್ವವಿಖ್ಯಾತ ದಸರಾ ಮಹೋತ್ಸವ–೨೦೧೭ರ ದಸರಾ ಕ್ರೀಡಾ ಕೂಟದಲ್ಲಿ ಎರಡು ವರ್ಷದ ನಂತರ ರಾಷ್ಟ್ರೀಯ ಮಟ್ಟದ ಕ್ರೀಡೆಗಳನ್ನು ಆಯೋಜಿಸುವ ಮೂಲಕ ಕ್ರೀಡಾಕೂಟಕ್ಕೊಂದು ಮೆರೆಗು ನೀಡಲು ದಸರಾ ಕ್ರೀಡಾ ಉಪ ಸಮಿತಿ ಮುಂದಾಗಿದೆ.

ಸೆ.೨೧ರಿಂದ ಕ್ರೀಡಾಕೂಟಗಳು ಪ್ರಾರಂಭವಾಗಲಿದ್ದು, ಜನಪ್ರಿಯ ಕ್ರೀಡೆಗಳಾದ ಕಬಡ್ಡಿ, ವಾಲಿಬಾಲ್, ಖೋ–ಖೋ, ಬ್ಯಾಡ್ಮಿಂಟನ್ ಆಟಗಳನ್ನು ನಗರದ ವಿವಿಧ ಕಡೆಗಳಲ್ಲಿ ಆಯೋಜಿಸಲಾಗಿದೆ. ರಾಷ್ಟ್ರದ ಪ್ರತಿಷ್ಠಿತ ತಂಡಗಳು ಹಾಗೂ ಪ್ರತಿಭಾವಂತ ಕ್ರೀಡಾಪಟುಗಳು ಭಾಗವಹಿಸಲಿದ್ದಾರೆ.

ರಾಷ್ಟ್ರಮಟ್ಟದಲ್ಲಿ ಪುರುಷರ ಪ್ರೊ ಕಬಡ್ಡಿ ಪಂದ್ಯಗಳು ನಡೆಯುತ್ತಿರುವುದರಿಂದ ದಸರಾ ಕ್ರೀಡಾಕೂಟದಲ್ಲಿ ಮಹಿಳೆಯರ ಕಬಡ್ಡಿ ಪಂದ್ಯಗಳನ್ನು ಆಯೋಜಿಸಲಾಗಿದೆ. ಈ ಪಂದ್ಯಗಳಲ್ಲಿ ರಾಷ್ಟ್ರಮಟ್ಟದ ಮಹಿಳಾ ಕ್ರೀಡಾಪಟುಗಳು ಪಾಲ್ಗೊಂಡು ಕಬಡ್ಡಿಗೆ ಸ್ಟಾರ್ ಇಮೇಜ್ ತರಲಿದ್ದಾರೆ.

**ಸೆ.೨೧ಕ್ಕೆ ಕ್ರೀಡಾಜ್ಯೋತಿಗೆ ಚಾಲನೆ:** ದಸರಾ ಮಹೋತ್ಸವದ ಆರಂಭದ ದಿನವಾದ ಸೆ.೨೧ರಂದು ಚಾಮುಂಡೇಶ್ವರಿಗೆ ಪುಷ್ಪಾರ್ಚನೆ ಮಾಡಿದ ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕ್ರೀಡಾಜ್ಯೋತಿಗೆ ಚಾಲನೆ ನೀಡಲಿದ್ದಾರೆ. ಸಂಜೆ ೪ ಗಂಟೆಗೆ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ದಸರಾ ಕ್ರೀಡಾಕೂಟ ಉದ್ಘಾಟನೆಗೊಳ್ಳಲಿದ್ದು, ಸೆ.೨೪ರವರೆಗೆ ನಡೆಯಲಿದೆ.



### ಇಂದು ಕ್ರೀಡಾಪಟುಗಳ ಆಯ್ಕೆ

೨೦೧೭–೧೮ನೇ ಸಾಲಿನ ಮೈಸೂರು ವಿಭಾಗಮಟ್ಟದ ದಸರಾ ಕ್ರೀಡಾಕೂಟಕ್ಕೆ ಮೈಸೂರು ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟದ ಸ್ಪರ್ಧೆಯ ಆಯ್ಕೆ ಪ್ರಕ್ರಿಯೆ ಸೆ.೧ರಂದು ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ನಡೆಯಲಿದೆ.

ಮೈಸೂರು ಜಿಲ್ಲೆಯ ೭ ತಾಲ್ಲೂಕುಗಳಲ್ಲಿ ನಡೆದ ತಾಲ್ಲೂಕುಮಟ್ಟದ ದಸರಾ ಕ್ರೀಡಾಕೂಟದಲ್ಲಿ ವಿಜೇತರಾದ ವೈಯಕ್ತಿಕ ವಿಭಾಗದಲ್ಲಿ ಅಂದರೆ ಅಥ್ಲೆಟಿಕ್ಸ್ ವಿಭಾಗದ ವೈಯಕ್ತಿಕ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಥಮ ಹಾಗೂ ದ್ವಿತೀಯ ಸ್ಥಾನ ಪಡೆದವರು, ಗುಂಪು ಸ್ಪರ್ಧೆಗಳಲ್ಲಿ ಅಂದರೆ ಅಥ್ಲೆಟಿಕ್ಸ್ (ಗುಂಪು ಸ್ಪರ್ಧೆ), ಖೋ–ಖೋ, ಕಬಡ್ಡಿ, ವಾಲಿಬಾಲ್, ಬಾಲ್ ಬ್ಯಾಡ್ಮಿಂಟನ್ ಮತ್ತು ಫುಟ್‌ಬಾಲ್ ಕ್ರೀಡೆಗಳಲ್ಲಿ ಸ್ಪರ್ಧಿಸಿ ಪ್ರಥಮ ಸ್ಥಾನ ಪಡೆದವರು ಜಿಲ್ಲಾಮಟ್ಟಕ್ಕೆ ಅರ್ಹರಾಗಿರುತ್ತಾರೆ.

> ದಸರಾ ಮಹೋತ್ಸವದಲ್ಲಿ ಆಯೋಜಿಸಿರುವ ರಾಷ್ಟ್ರಮಟ್ಟದ ಕ್ರೀಡೆಗಳಲ್ಲಿ ಭಾಗವಹಿಸುವವರಿಗೆ ವಸತಿ ಹಾಗೂ ಇತರ ಸೌಕರ್ಯ ಒದಗಿಸುವ ಸಿದ್ಧತೆ ನಡೆಯುತ್ತಿದೆ. ರಾಜ್ಯಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸುವ ಪುರುಷ ಕ್ರೀಡಾಪಟುಗಳಿಗೆ ನಗರದ ವಿವಿಧ ಕಲ್ಯಾಣ ಮಂಟಪಗಳು ಹಾಗೂ ಮಹಿಳೆಯರಿಗೆ ನಂಜರಾಜ ಬಹದ್ದೂರ್ ಚೌಲ್ಟ್ರಿಯಲ್ಲಿ ವ್ಯವಸ್ಥೆ ಮಾಡಲಾಗಿದೆ.
> **-ಕೆ.ಸುರೇಶ್, ಸಹಾಯಕ ನಿರ್ದೇಶಕ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.**

ಈ ಬಾರಿ ರಾಜ್ಯಮಟ್ಟದ ದಸರಾ ಕ್ರೀಡಾ ಕೂಟದಲ್ಲಿ ಒಟ್ಟು ೧೮ ಸ್ಪರ್ಧೆಗಳು ನಡೆಯಲಿವೆ. ಅಥ್ಲೆಟಿಕ್ಸ್, ಬ್ಯಾಸ್ಕೆಟ್‌ಬಾಲ್, ಬಾಲ್ ಬ್ಯಾಡ್ಮಿಂಟನ್, ಜಿಮ್ನಾಸ್ಟಿಕ್ಸ್, ಹಾಕಿ, ಹ್ಯಾಂಡ್‌ಬಾಲ್, ಕಬಡ್ಡಿ, ಖೋ–ಖೋ, ನೆಟ್‌ಬಾಲ್, ಈಜು, ಷಟಲ್ ಬ್ಯಾಡ್ಮಿಂಟನ್, ಥ್ರೋಬಾಲ್, ವಾಲಿಬಾಲ್, ದೇಹದಾರ್ಢ್ಯ(ಪು) ತೂಕ ವಿಭಾಗ, ದೇಹದಾರ್ಢ್ಯ(ಪು) ಎತ್ತರ ವಿಭಾಗ ಹಾಗೂ ಹಾಫ್ ಮ್ಯಾರಥಾನ್ ನಗರದ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ನಡೆಯಲಿವೆ.

ರೋಟರಿ ವೆಸ್ಟ್ ಶಾಲೆಯಲ್ಲಿ ಟೇಬಲ್ ಟೆನ್ನಿಸ್, ಮೈಸೂರು ವಿವಿ ಸ್ಪೋರ್ಟ್ಸ್ ಪೆವಿಲಿಯನ್ ಕ್ರೀಡಾಂಗಣದಲ್ಲಿ ಫುಟ್‌ಬಾಲ್ ಹಾಗೂ ಮೈಸೂರು ಟೆನ್ನಿಸ್ ಕ್ಲಬ್ ಮೈದಾನದಲ್ಲಿ ಟೆನ್ನಿಸ್ ಆಯೋಜಿಸಲಾಗಿದೆ.